ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್**

**ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ**

ಸಂಖ್ಯೆ : ಗ್ರಾಅಪ/ರಾನೀನೈಮಿ/ಎನ್‌ಬಿಎ/84/2012-13/1593 ದಿನಾಂಕ :24.02.2014

**ರವರಿಗೆ,**

ಸದಸ್ಯ ಕಾರ್ಯದರ್ಶಿಗಳು
ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಬೆಂಗಳೂರು.

**ಮಾನ್ಯರೆ,**

**ವಿಷಯ:** ಪ್ರೌಢ ಶಾಲೆಗಳಲ್ಲಿ ಇನ್ಸಿನಿರೇಟರ್‌ಗಳನ್ನು ಅಳವಡಿಸುವ ಬಗ್ಗೆ ತಾಂತ್ರಿಕ ಅಭಿಪ್ರಾಯ ನೀಡುವ ಕುರಿತು

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ಗ್ರಾಮೀಣ ಪ್ರೌಢ ಶಾಲೆಗಳಲ್ಲಿ ಪ್ರೌಢಾವಸ್ಥೆಯ ಹೆಣ್ಣು ಮಕ್ಕಳು ಬಳಸುವ ನ್ಯಾಪ್‌ಕಿನ್‌ಗಳನ್ನು ಸುಡುವ Electric ಇನ್ಸಿನಿರೇಟರ್‌ಗಳನ್ನು ಅಳವಡಿಸಲು ನಿರ್ಮಲ ಭಾರತ ಅಭಿಯಾನದ ಮಾರ್ಗಸೂಚಿಯಲ್ಲಿ ಕೇಂದ್ರ ಸರ್ಕಾರ ಅವಕಾಶ ಕಲ್ಪಿಸಿದೆ.

ಈ ಹಿನ್ನೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಪ್ರಾಯೋಗಿಕವಾಗಿ 100 ಹೆಣ್ಣು ಮಕ್ಕಳು ಹೆಚ್ಚಾಗಿರುವ ಪ್ರೌಢ ಶಾಲೆಗಳಲ್ಲಿ ಹಾಗೂ 2014-15ನೇ ಸಾಲಿನಲ್ಲಿ 4 ಸಾವಿರ ಪ್ರೌಢ ಶಾಲೆಗಳಲ್ಲಿ ನ್ಯಾಪ್‌ಕಿನ್‌ಗಳನ್ನು ಸುಡುವ ಇನ್ಸಿನಿರೇಟರ್‌ಗಳನ್ನು ಅಳವಡಿಸಲು ಯೋಜನೆ ರೂಪಿಸಲಾಗಿದೆ. ಈಗಾಗಲೇ ಹಲವಾರು ಕಂಪನಿಗಳು Electric ಆಧಾರಿತ Incinerator/Disposer ಗಳನ್ನು ಅಳವಡಿಸಲು ಮುಂದೆ ಬಂದಿವೆ. ಆದ್ದರಿಂದ ಈ ಕೆಳಕಂಡ ಅಂಶಗಳ ಬಗ್ಗೆ ತಮ್ಮ ತಾಂತ್ರಿಕ ಅಭಿಪ್ರಾಯವನ್ನು ತಿಳಿಸಲು ಕೋರಲಾಗಿದೆ.

1) ಹೆಣ್ಣುಮಕ್ಕಳು ಋತು ಸ್ರಾವದ ವೇಳೆ ಬಳಸುವ ನ್ಯಾಪ್‌ಕಿನ್‌ಗಳನ್ನು ಸುಡಲು Electric ಆಧಾರಿತ Incinerator/Disposerಯಂತ್ರಗಳನ್ನು ಬಳಸಬಹುದೇ?
2) ಈ ರೀತಿಯ Electric Incinerator/ Disposerಗಳನ್ನು ಪ್ರೌಢ ಶಾಲೆಗಳಲ್ಲಿ ಅಳವಡಿಸುವುದರಿಂದ ಮಕ್ಕಳ ಆರೋಗ್ಯ ಹಾಗೂ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದೇ?
3) ಮಾರುಕಟ್ಟೆಯಲ್ಲಿ ಲಭ್ಯವಿರುವ ಇನ್ಸಿನಿರೇಟರ್‌ಗಳು ಪರಿಸರ ಮಾಲಿನ್ಯ/ ತಾಂತ್ರಿಕ Clearance ದೃಢಿಕರಣ ಪತ್ರವನ್ನು ಹೊಂದಿರುತ್ತವೆಯೇ ?
4) ಹೊಂದಿದ್ದಲ್ಲಿ ಈ ದೃಢಿಕರಣ ಪತ್ರಗಳನ್ನು ನೀಡುವ ಸಮಕ್ಷಮ ಪ್ರಾಧಿಕಾರ(Compelent Authority)ಗಳ ವಿವರಗಳು
5) ಇಂತಹ ಯಂತ್ರಗಳು ಪರಿಸರ ಸ್ನೇಹಿಯುತವಾಗಿರುತ್ತವೆಯೇ?

ಎಂಬುದರ ಕುರಿತು ತಮ್ಮ ತಾಂತ್ರಿಕ ಅಭಿಪ್ರಾಯವನ್ನು ತಿಳಿಸುವುದು.

ತಮ್ಮ ವಿಶ್ವಾಸಿ

ಮಿಷನ್ ನಿರ್ದೇಶಕರು
ರಾಜ್ಯ ನೀರು & ನೈರ್ಮಲ್ಯ ಮಿಷನ್ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು
ಗ್ರಾ ಅ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು:-**

1. ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತಕಾರ್ಯದರ್ಶಿಯವರ ಮಾಹಿತಿಗಾಗಿ.
2. ಆಯುಕ್ತರು, ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆ ಇವರ ಮಾಹಿತಿ ಹಾಗೂ ಸೂಕ್ತ ಅಭಿಪ್ರಾಯ ತಿಳಿಸಲು ಕೋರಿದೆ.
3. ಆಯುಕ್ತರು,(Public Instruction)ಸಾರ್ವಜನಿಕ ಶಿಕ್ಷಣ ಇಲಾಖೆ,ಇವರ ಮಾಹಿತಿಗಾಗಿ.

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು – 560 009.
ದೂರವಾಣಿ ಸಂ.22221861-62 : - ಫ್ಯಾಕ್ಸ್ :-22221862 E-mail : wsrdpr@gmail.com.